

# ರೊಮ್ಯಾಂಟಿಕ್ ಮಾಲ್ಡೀವ್ಸ್



ಸಮುದ್ರಮಟ್ಟದಿಂದ ಸರಾಸರಿ ಕೇವಲ ಐದು ಅಡಿ ಎತ್ತರವಿರುವ ಇಲ್ಲಿಯ ದ್ವೀಪಗಳು 'ಈ ಶತಮಾನದ ಅಂತ್ಯದ ವೇಳೆಗೆ' ನೀರಿನಲ್ಲಿ ಮುಳುಗಿ ಕಣ್ಮರೆಯಾಗುವುದಕ್ಕಿಂತ ಮುಂಚೆ ಒಮ್ಮೆ ನೋಡಲೇಬೇಕು!

■ ಚಿತ್ರ ಲೇಖನ:
**ವಿ. ಪ್ರದೀಪ್ ಕುಮಾರ್**

**ಮಾ**ಲ್ಡೀವ್ಸ್, ಹಿಂದೂ ಮಹಾಸಾಗರದ ಒಡಲಿನಲ್ಲಿರುವ, 750 ಕಿ.ಮೀ. ಉದ್ದಗಲದ 1192 ಹವಳ ದ್ವೀಪಗಳ ಸಮೂಹ. ಶೇಡಕಾ 99ರಷ್ಟು ಮುಸ್ಲಿಮರಿರುವ ಇಲ್ಲಿನ ಸಂಸ್ಕೃತಿ, ಶ್ರೀಲಂಕಾ, ದಕ್ಷಿಣ ಭಾರತ ಮತ್ತು ಅರಬ್ ರಾಷ್ಟ್ರಗಳ ಪ್ರಭಾವಕ್ಕೆ ಒಳಗಾಗಿದೆ.

### ರೊಮಾಂಟಿಕ್ ದ್ವೀಪ ರಾಷ್ಟ್ರ

'ಪ್ರಣಯಕ್ಕೆ ಪ್ರಶಸ್ತ ತಾಣ ಯಾವುದು?' ಎಂದು ಯಾರಾದರೂ ಕೇಳಿದರೆ ಇಂಟರ್‌ನೆಟ್‌ನಲ್ಲಿ ಹುಡುಕಾಡಬೇಡಿ. 'ವರ್ಲ್ಡ್ ಟ್ರಾವೆಲ್ ಅವಾರ್ಡ್ಸ್'ನಲ್ಲಿ 'ಜಗತ್ತಿನ ಅತ್ಯಂತ ಪ್ರಶಸ್ತ ರೊಮ್ಯಾಂಟಿಕ್ ತಾಣ' ವೆಂದು, ಸತತವಾಗಿ ಬಿರುದು ಗಳಿಸುತ್ತಿರುವ ತಾಣವೇ ಮಾಲ್ಡೀವ್ಸ್. ಈ ಸ್ಪರ್ಧೆಯಲ್ಲಿ ಅದು ಜಗತ್ತಿನ ಅತ್ಯಂತ ಜನಪ್ರಿಯ ಸ್ಥಳಗಳಾದ ಬಾಲಿ, ಸೀಶೆಲ್ಸ್, ಮಾರಿಷಸ್, ವೆನಿಸ್, ಹವಾಯ್, ಪ್ಯಾರಿಸ್‌ಗಳನ್ನೂ ಹಿಂದಿಕ್ಕಿದೆ! ಆದ್ದರಿಂದಲೇ, ಇಂಟರ್ ನ್ಯಾಷನಲ್ ಟ್ರಾವೆಲ್ ಮ್ಯಾಗಜಿನ್ ಸೇರಿದಂತೆ, ಅನೇಕ ಪತ್ರಿಕೆಗಳು ಮಾಲ್ಡೀವ್ಸ್ ಹನಿಮೂನ್‌ಗೆ ಅತ್ಯಂತ ಸೂಕ್ತ ಸ್ಥಳ ಎಂದು ಘೋಷಿಸಿದೆ.

ಅಷ್ಟೇ ಅಲ್ಲ! ಕೆನಡಾ ದೇಶದಲ್ಲಿನ 'ನ್ಯೂ 7 ವಂಡರ್ಸ್ ಅಫ್ ನೇಚರ್' ಪ್ರತಿಷ್ಠಾನದ ವತಿಯಿಂದ ಏಳು ಅದ್ಭುತಗಳನ್ನು ನಿರ್ಧರಿಸುವುದಕ್ಕಾಗಿ, ಜಗತ್ತಿನಾದ್ಯಂತ ಗುರುತಿಸಿದ ಅಂತಿಮ ಸ್ಥಳಗಳಲ್ಲಿ ಮಾಲ್ಡೀವ್ಸ್ ಸಹಾ ಒಂದು. ಆದ್ದರಿಂದಲೇ ಕೇವಲ ಮೂರೂವರೆ ಲಕ್ಷ ಜನಸಂಖ್ಯೆಯಿದ್ದರೂ, ವರ್ಷಕ್ಕೆ 5 ಲಕ್ಷ ಪ್ರವಾಸಿಗರು ಮಾಲ್ಡೀವ್ಸ್‌ನತ್ತ ಧಾವಿಸುತ್ತಾರೆ. ಇದು ಮಾಲ್ಡೀವ್ಸ್‌ನ ಜನಪ್ರಿಯತೆಗೆ ಸಾಕ್ಷಿ.

### ರಾಷ್ಟ್ರೀಯ ವಾಹನ ಬೋಟ್

ವಿಮಾನ ನಿಲ್ದಾಣದಿಂದ ಹೊರಬರುತ್ತಿದ್ದಂತೆಯೇ ಆಶ್ಚರ್ಯ! ಇಲ್ಲಿ ಕಾರು, ಟ್ಯಾಕ್ಸಿ, ಬಸ್ಸುಗಳಿಲ್ಲ; ಬರೀ ದೋಣಿಗಳು, ಕಿರು ನೌಕೆಗಳು! ಏಕೆಂದರೆ, ಮಾಲ್ಡೀವ್ಸ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇರುವುದೇ ಒಂದು ದ್ವೀಪದಲ್ಲಿ. ಪ್ರಯಾಣಿಕರನ್ನು ಹತ್ತಿರದ ಮಾಲೆ ಅಥವಾ ರೆಸಾರ್ಟ್ ದ್ವೀಪಗಳಿಗೆ ಕರೆದೊಯ್ಯಲು ಬೋಟ್ ಇಲ್ಲಿನ ರಾಷ್ಟ್ರೀಯ ವಾಹನ.

ಮಾಲ್ಡೀವ್ಸ್‌ಗೆ ನಾವು ಭೇಟಿ ಮಾಡಲು ಅನೇಕ ಕಾರಣಗಳಿದ್ದವು. ದಿನಪ್ರಂತಿ ಹವಾಮಾನದ ಬಗ್ಗೆ– ಬೆಂಗಳೂರಿನಲ್ಲಿ ಬಿಸಿಲು, ಚಳಿ, ಮಳೆ ಹೆಚ್ಚಾಗಿರುವುದನ್ನೋ, ಅಥವಾ ಹಳ್ಳಿಗಳಲ್ಲಿ ಮಳೆಯಿಲ್ಲದೆ ಹಾಳಾಗುತ್ತಿರುವ ಬೆಳೆಗಳ ಬಗ್ಗೆಯೋ ಮಾತನಾಡುತ್ತಿರುತ್ತೇವೆ. ಆದರೆ, ಪ್ರಕೃತಿಯ ವಿಕೋಪ, ಯಾವ ಮಟ್ಟಕ್ಕೆ ಹೋಗಬಹುದು ಎನ್ನುವುದರ ಕಲ್ಪನೆಯನ್ನು ಸರಿಯಾಗಿ ಅರಿಯಲು ಮಾಲ್ಡೀವ್ಸ್‌ಗೆ ಬರಬೇಕು. ಬಿಸಿಯಾಗುತ್ತಿರುವ ಪೃಥ್ವಿಯ ನೇರವಾದ ಪರಿಣಾಮದಿಂದ, ಸಾಗರದ ತಾಪಮಾನ ಮತ್ತು ನೀರಿನ ಮಟ್ಟ ಇಲ್ಲಿ ಹೆಚ್ಚಾಗುತ್ತಿದೆಯೆಂದು ಈಗಾಗಲೆ ಜಾಗತಿಕ ವರದಿಗಳು ಪ್ರಕಟವಾಗಿವೆ. ಇಲ್ಲಿ ಭೂಮಿಯ ಸರಾಸರಿ ಎತ್ತರ ಸಮುದ್ರ ಮಟ್ಟದಿಂದ ಐದು ಅಡಿಯಷ್ಟೆ! ಗುಡ್ಡ, ಬೆಟ್ಟಗಳಿಲ್ಲದೆ, ಇಲ್ಲಿನ ದ್ವೀಪಗಳು ದೋಸೆಯಂತೆ ಚಪ್ಪಟೆಯಾಗಿವೆ.

ನಾವು ಇಳಿದುಕೊಳ್ಳಬೇಕಿದ್ದ ರೆಸಾರ್ಟಿನ ಪ್ರತಿನಿಧಿ ಇಲ್ಯಾಸ್ ಭಿತ್ತಿಪತ್ರದೊಡನೆ ಅಲ್ಲಿ ಹಾಜರಿದ್ದ. ಅವನನ್ನು ಹಿಂಬಾಲಿಸಿದೆವು. ಒಂದು ಗಂಟೆಯ ಪಯಣ. ಅಲೆಗಳನ್ನು ಹಿಮ್ಮೆಗ್ಗಿಸಿ ಬೋಟ್ ವೇಗವಾಗಿ ಚಲಿಸುತ್ತಿತ್ತು. ಮಾಲ್ಡೀವ್ಸ್ ಪ್ರಗತಿಯ ಹಾದಿಯಲ್ಲಿ ತೇಲ ಬಲ್ಲುದೇ ಅಥವಾ ಮುಳುಗಡೆಯಾಗುವುದೇ ಎಂಬ ಪ್ರಶ್ನೆ ಕಾಡುತ್ತಿದ್ದುದನ್ನು ಇಲ್ಯಾಸ್‌ಗೇ ಕೇಳಿದೆ– 'ಸಮುದ್ರ ಮಟ್ಟ ಏರುತ್ತಿರುವುದರಿಂದ ಇಲ್ಲಿನ ಜನಜೀವನದ ಮೇಲೆ ಏನು ಪರಿಣಾಮಗಳಾಗಿವೆ?' ಎಂದು.

ಸುಮಾರು ಐವತ್ತರ ವಯಸ್ಸಿನ ಹಸನ್ಮುಖಿ ಇಲ್ಯಾಸ್– 'ಜೀವನ ಸಾಗುತ್ತಿದೆ' ಎಂದಷ್ಟೇ ಹೇಳಿದ. ಅವನ ಮುಖದಲ್ಲೂ ಚಿಂತೆಯ ಗೆರೆಗಳಿದ್ದವು. ಒಂದೆರಡು ಕ್ಷಣದ ಮೌನದ ನಂತರ, ದುಃಖದ ನಿಟ್ಟುಸಿರು ಬಿಡುತ್ತಾ "ನಮ್ಮ ಬಗ್ಗೆ ಚಿಂತೆಯಿಲ್ಲ; ಆದರೆ ಎರಡು ವಾರಗಳ ಹಿಂದೆಯಷ್ಟೇ ಹುಟ್ಟಿದ ನನ್ನ ಮೊಮ್ಮಗಳು ಆಲಿಷ ಮತ್ತು ಅವಳ ಸಂತತಿಯ ಬಗ್ಗೆ ಆತಂಕ, ಭಯವಿದೆ. ಅವರು ಈ ದೇಶದಿಂದ ಎಂದಾದರೂ ವಲಸೆ ಹೋಗಬೇಕಾಗುತ್ತದೆ" ಎಂದ.

ಇಲ್ಯಾಸನ ಮಾತಿನಲ್ಲಿ ಉತ್ಪ್ರೇಕ್ಷೆ ಕಾಣಲಿಲ್ಲ. ಹಲವು ಪರಿಸರ ತಜ್ಞರ ಪ್ರಕಾರ, ಈ ಶತಮಾನದ ಅಂತ್ಯದೊಳಗೆ ಮಾಲ್ಡೀವ್ಸ್ ಮುಳುಗಡೆಯಾಗುವ ಸಾಧ್ಯತೆಯಿದೆ. ಮಾತು ಮುಂದುವರಿಸುತ್ತಾ ಕೇಳಿದೆ– "ಈ ಆತಂಕದಿಂದ, ಅನಿಶ್ಚಯತೆಯಿಂದ ಪ್ರವಾಸೋದ್ಯಮ, ವ್ಯಾಪಾರದಲ್ಲಿ ಕುಸಿತವಾಗಿದೆಯೇ?"

"ಇಲ್ಲ. ಅಲ್ಲಾಹುನ ದಯೆ; ಈಗಂತೂ, ಸಾಕಷ್ಟು ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಿದ್ದಾರೆ. ಪ್ರವಾಸೋದ್ಯಮವೇ ಇಲ್ಲಿನ ಮುಖ್ಯ ವರಮಾನ. ವಿನಾಶದ ಅಂಚಿನಲ್ಲಿರುವ ನಮ್ಮ ದೇಶಕ್ಕೆ, ಆಸ್ಟ್ರೇಲಿಯ, ಜಪಾನ್, ಯೂರೋಪ್ ಮತ್ತು





ಅಮೆರಿಕ ರಾಷ್ಟ್ರಗಳಿಂದಲೂ ಪ್ರವಾಸಿಗರು ಬರುತ್ತಿದ್ದಾರೆ" ಎಂದ.

ಇಲ್ಯಾಸನ ದೇಹಭಾಷೆಯಲ್ಲಿ, ಪ್ರಕೃತಿಯ ವಿಕೋಪಕ್ಕೆ ಮುಂದುವರಿದ ರಾಷ್ಟ್ರಗಳು ಕಾರಣವೆಂಬ ವ್ಯಂಗ್ಯವಿರಲಿಲ್ಲ. ಆದರೆ, ಆ ಮಾತಿನಲ್ಲಿ ಸತ್ಯವಿದೆ.

ಇತ್ತೀಚಿನ ವರ್ಷಗಳಲ್ಲಿ ಬಿಸಿಯಾಗುತ್ತಿರುವ ಪೃಥ್ವಿಯ ಪರಿಣಾಮ, ಪರಿಹಾರ-ಗಳ ಬಗ್ಗೆ ಜಗತ್ತಿನಲ್ಲಿ ಸಾಕಷ್ಟು ಚರ್ಚೆಯೂ, ಕಲಹಗಳೂ ಆಗುತ್ತಿವೆ. ಈ ಎಲ್ಲ ಚರ್ಚೆ, ವಿವಾದಗಳಲ್ಲಿ ಮಾಲ್ದೀವ್ಸ್ ದೇಶದ ರಾಷ್ಟ್ರಪತಿ, 44ರ ಹರೆಯದ, ಚೈತನ್ಯಯುತ ವ್ಯಕ್ತಿತ್ವದ ಮೊಹಮದ್ ನಶೀದ್ ಗಮನ ಸೆಳೆಯುತ್ತಿದ್ದಾರೆ. ದೇಶವನ್ನು 2020ರಲ್ಲಿ ಕಾರ್ಬನ್‌ರಹಿತವನ್ನಾಗಿ ಮಾಡುವುದು ಇವ ಧ್ಯೇಯ. ಅವರು ಇತ್ತೀಚೆಗಷ್ಟೇ ಹೇಳಿದ ಮಾತು- ಮಾಲ್ದೀವ್ಸ್‌ಅನ್ನು ಕಾರ್ಬನ್‌ರಹಿತ ಮಾಡಿ, ಜಗತ್ತನ್ನು ತಲ್ಲಣಗೊಳಿಸಿ, ಬೆದರಿಸುವ ಉದ್ದೇಶವಿಲ್ಲ. ಪರಿಸರ ಸಂರಕ್ಷಣೆಯಲ್ಲಿ ಇದೊಂದು ಸರಿಯಾದ ಹೆಜ್ಜೆಯಷ್ಟೇ."

## ನೀರೊಳಗೆ ಕ್ಯಾಬಿನೆಟ್ ಮೀಟಿಂಗ್

ಭ್ರಷ್ಟಾಚಾರದ ಆರೋಪಗಳ ಸುಳಿಯಲ್ಲಿ ಒದ್ದಾಡುತ್ತಿರುವ ರಾಜಕಾರಣಿಗಳನ್ನು ನೋಡುತ್ತಿರುವ ನಮಗೆ, ಇದೊಂದು ಸೋಜಿಗದ ವಿಷಯ. ನಶೀದ್ ಎಷ್ಟು ಕ್ರಿಯಾಶೀಲರೆನ್ನುವುದಕ್ಕೆ ಉದಾಹರಣೆಯಂತೆ, 2009ರ ಅಕ್ಟೋಬರ್ 17ರಂದು, ತನ್ನ ಮಂತ್ರಿಮಂಡಲದ ಸಭೆಯನ್ನು ಸಾಗರದಾಳದಲ್ಲಿ ನಡೆಸಿದರು. ಎಲ್ಲ ಮಂತ್ರಿವರ್ಯರೊಂದಿಗೆ ನಶೀದ್, ಸ್ಕೂಬಾ ಡೈವಿಂಗಿನ ವಿಶೇಷ ಉಡುಪು-ಗಳನ್ನು ಧರಿಸಿ, ಸಾಗರದಾಳದಲ್ಲಿ ಸಭೆ ನಡೆಸಿ ಪರಿಸರವಾದಿಗಳ ಗಮನ ಸೆಳೆಯು-ವಲ್ಲಿ ಯಶಸ್ವಿಯಾದರು. ಇದು ಜಗತ್ತಿನ ಪ್ರಪ್ರಥಮ 'ಅಂಡರ್ ವಾಟರ್ ಕ್ಯಾಬಿನೆಟ್ ಮೀಟಿಂಗ್" ಎಂದು ದಾಖಲಾಗಿದೆ!

ಇಲ್ಯಾಸ್ ಆಕರ್ಷಕ ಮಾತುಗಾರ. ದ್ವೀಪಗಳನ್ನು ದಾಟುತ್ತಿದ್ದಂತೆ, ಸೂಕ್ತ ಮಾಹಿತಿಯನ್ನೂ, ವಿವರಗಳನ್ನೂ ನೀಡುತ್ತಿದ್ದ. ಮಾತಿನ ಮಧ್ಯೆ ನಾನು "ನಶೀದ್ ಅವರು ಸಾಕಷ್ಟು ಕಾಳಜಿಯಿಂದ, ಶ್ರದ್ಧೆಯಿಂದ ಕೆಲಸಗಳನ್ನು ಮಾಡುತ್ತಿದ್ದಾರಲ್ಲವೇ?" ಎಂದು ಕೇಳಿದೆ. ತಕ್ಷಣ ಇಲ್ಯಾಸ್ "ನೀವು ಹೇಳುವುದು ನಿಜ. ರಾಷ್ಟ್ರಪತಿ ನಶೀದ್‌ರ ವಿವೇಕದ ಮಾತುಗಳು ಜಗತ್ತಿನ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಆದರೆ, ಇದರಿಂದ ನಮ್ಮ ಭವಿಷ್ಯವನ್ನು ಬದಲಾಗಿಸಲಾದೀತೆ?" ಎಂದು ಪ್ರಶ್ನಿಸಿದ.

ಅವನ ಮಾತುಗಳಲ್ಲಿ ನಿಜವಿರಬಹುದು. ಆದರೆ, ನಶೀದ್ 'ನಮ್ಮ ನಾಗರಿಕರು ನಿರ್ಗತಿಕರಾಗಿ ವಲಸೆ ಹೋಗುವ ಅಗತ್ಯವಿಲ್ಲ' ಎಂದು ಹೇಳುತ್ತಾ ಕಾರ್ಯಪ್ರವೃತ್ತರಾಗಿದ್ದಾರೆ. ಹೊಸದೊಂದು ದ್ವೀಪವನ್ನು ನಿರ್ಮಿಸುವುದಲ್ಲದೆ, ಹತ್ತಿರದ ಶ್ರೀಲಂಕಾ, ಭಾರತ ಮತ್ತು ದೂರದ ಆಸ್ಟ್ರೇಲಿಯದಲ್ಲೂ ತಮ್ಮ ದೇಶದ ನಾಗರಿಕರು ಜಮೀನು ಖರೀದಿಸುವ ಅವಕಾಶವನ್ನು ಸೃಷ್ಟಿಸುತ್ತಿದ್ದಾರೆ. ಮಾಲ್ದೀವ್ಸ್ ಮುಳುಗಡೆಯಾಗುವುದರ ಬಗ್ಗೆ ವಾದ- ವಿವಾದಗಳಾಗುತ್ತಿವೆ. ಕೆಲವು ಪರಿಸರ ತಜ್ಞರು 'ಸಮುದ್ರ ಮಟ್ಟದಲ್ಲಿ ಏರಿಕೆಯಾಗುತ್ತಿರುವ ಬಗ್ಗೆ ಖಚಿತವಾದ ಮಾಹಿತಿಯಿಲ್ಲ. ಆದ್ದರಿಂದ, ಮಾಲ್ದೀವ್ಸ್ ಸರ್ಕಾರದ ವಾದ, ಪ್ರಚಾರ ತಂತ್ರವಷ್ಟೇ' ಎನ್ನುತ್ತಿದ್ದಾರೆ.

## ಮನಮೋಹಕ ದೃಶ್ಯ

ಈ ವಾದದ ಸತ್ಯ- ಅಸತ್ಯಗಳೇನೇ ಇರಲಿ, ಮಾಲ್ದೀವ್ಸ್ ಸುಂದರ ಪ್ರಪಂಚ ಎಂಬುದು ನಿರ್ವಿವಾದ. 'ಅದೋ ನೋಡಿ, ನಮ್ಮ ರೆಸಾರ್ಟ್ ಬಂತು' ಎಂದು ಹತ್ತಿರದಲ್ಲೇ ಕಾಣುತ್ತಿದ್ದ ದ್ವೀಪವನ್ನು ತೋರಿಸುತ್ತಾ ಇಲ್ಯಾಸ್ ಹೇಳಿದ. ತೆಂಗಿನ ಮತ್ತು ತಾಳೆ ಮರಗಳ ಮಧ್ಯೆ ಕೆಂಪು ಮತ್ತು ಕಂದು ಬಣ್ಣದ ಕಾಟೇಜ್‌ಗಳು. ದ್ವೀಪಕ್ಕೂ ಸಾಗರಕ್ಕೂ ನಡುವಿನ ಶ್ವೇತವರ್ಣದ ಮರಳನ್ನು ಆವರಿಸಿದ ಹಸಿರು-ನೀಲಿ ನೀರಿನ ದೃಶ್ಯ!

ಆಕರ್ಷಕವಾಗಿ ನಿರ್ಮಿಸಿದ್ದ ಜೆಟ್ಟಿಯಿಂದ, ಮೀಟರ್ ದೂರದಲ್ಲಿದ್ದ ರೆಸಾರ್ಟಿನ ಪ್ರವೇಶದ್ವಾರದಲ್ಲಿಯೇ, ನಿರ್ವಾಹಕ ಜೋಸೆಫ್ ಸ್ವಾಗತಿಸಿದರು. ನಾವು ತಂಪು ಪಾನೀಯವನ್ನು ಸ್ವೀಕರಿಸುತ್ತಿದ್ದಂತೆಯೇ ಜೋಸೆಫ್ ಹೇಳಿದರು- "ನಿಮಗೆ ಆಕ್ಷೇಪಣೆ ಇಲ್ಲದಿದ್ದರೆ ರೆಸಾರ್ಟಿನ ಪರಿಚಯವನ್ನು ಮಾಡಿಸುತ್ತೇನೆ."

ರೆಸಾರ್ಟಿನಲ್ಲಿ ನಡೆಯುತ್ತಾ ಜೋಸೆಫ್, ಒಂಬತ್ತು ಎಕರೆಯ ಈ ದ್ವೀಪದಲ್ಲಿ ಇರುವುದು ಇದೊಂದೇ ರೆಸಾರ್ಟ್. ನಿಮ್ಮ ಉಪಹಾರ ಮತ್ತು ಭೋಜನವನ್ನು ಇಲ್ಲೇ ಮಾಡುವುದು ಸೂಕ್ತ" ಎಂದರು. "ನಿಮ್ಮಲ್ಲಿ ಭಾರತೀಯ ವೆಜಿಟೇರಿಯನ್ ಸಿಕ್ಕುತ್ತದೆಯೇ?" ಎಂದು ಅನಿತಾ ಕೇಳಿದರೆ, "ಅವಶ್ಯವಾಗಿ. ನಮ್ಮಲ್ಲಿ ಎಲ್ಲಾ ಅಡುಗೆಗಳನ್ನೂ ಮಾಡುತ್ತೇವೆ" ಎಂದ ಜೋಸೆಫ್ ನಮಗೊಂದು ವಿಶೇಷವಾದ ಸೌಲಭ್ಯವನ್ನು ಕೊಟ್ಟರು- "ನಮ್ಮಲ್ಲೀಗ ಹೆಚ್ಚು ಭಾರತೀಯ ಪ್ರವಾಸಿಗರಿಲ್ಲ. ಆದ್ದರಿಂದ, ನೀವು ನಮಗೆ ಉಪಾಹಾರ ಮತ್ತು ಭೋಜನದ ಆದ್ಯತೆಯನ್ನು ರಾತ್ರಿಯೇ ತಿಳಿಸಿದರೆ, ಮರುದಿನದ ಬಫೆಯಲ್ಲಿ ಆ ಭಕ್ಷ್ಯಗಳಿರುತ್ತದೆ" ಎಂದರು.

ಪ್ರವಾಸಗಳು ಆಹ್ಲಾದಕರವಾಗಿರಬೇಕು; ತನುಮನದಲ್ಲಿ ಚೈತನ್ಯ ತುಂಬುವಂತಿರಬೇಕು. ಪ್ರವಾಸದಲ್ಲಿ ಗಡಿಬಿಡಿಯ ದಿನಚರಿಯಿಂದ ಸುಸ್ತಾಗಿ ಮನೆ ಸೇರಿ, ರಜಾ ಹಾಕುವಂತಾಗಬಾರದು. ಇಲ್ಲಿ ಮುಂಜಾನೆಯಿಂದ ರಾತ್ರಿಯವರೆಗೆ ಹಲವಾರು ಸ್ಥಳಗಳನ್ನು, ಬೇರೆಡೆಯಂತೆ ಕೆಲವೊಮ್ಮೆ ಆಸಕ್ತಿಯಿಂದಲೂ, ವಿಧಿಯಿಲ್ಲದೆಯೂ ನೋಡುವ ಗೋಜಿಲ್ಲ. ತಣ್ಣನೆ ಕುಳಿತು ಪುಸ್ತಕವೊಂದನ್ನು ಹಿಡಿದು ಓದತೊಡಗಿದೆ. ಈ ಪ್ರಶಾಂತ ವಾತಾವರಣದಲ್ಲಿ ಓದುವ ಅನುಭವವೇ ವಿಭಿನ್ನ. ಕತ್ತಲಾಗುತ್ತಿದ್ದಂತೆಯೇ ದೀಪಗಳು ಬೆಳಗಿ ನೀರಿನಲ್ಲಿ ಅದರ ಪ್ರತಿಫಲನವಾಗಿ ಬೇರೆಯೇ ಒಂದು ಲೋಕಕ್ಕೆ ಕರೆದೊಯ್ದಿತು. ರಾತ್ರಿ ರೆಸಾರ್ಟ್‌ನ ಹೊರಗೆ ಸ್ಥಳೀಯ ಜಾನಪದ ನೃತ್ಯ ಕಾರ್ಯಕ್ರಮವಿತ್ತು. ಅಲ್ಲಿನ ಭಾಷೆಯ ಹಾಡುಗಳು ಅರ್ಥವಾಗದಿದ್ದರೂ ನೃತ್ಯದ ಲಯ ಮನ ಮುಟ್ಟುವಂತಿತ್ತು. ಪ್ರವಾಸಿಗರು ಒಟ್ಟಾಗಿ ಕುಣಿಯುವುದು ನೋಡಿದಾಗ, ಇದೊಂದು ಬೇರೆಯೇ ಜಗತ್ತು ಅನ್ನಿಸಿತು.





## ಮೀನುಪ್ರಿಯರ ಸ್ವರ್ಗ

ಇಲ್ಲಿನ ಸಮುದ್ರತೀರದಲ್ಲಿ ಮೀನುಗಾರರು ವಿಶ್ರಮಿಸಲು ಅಲ್ಲಲ್ಲಿ ಮರದ ಆಸನಗಳನ್ನು ನಿರ್ಮಿಸಿದ್ದಾರೆ. ಸಂಜೆಯ ನಂತರ, ಪ್ರವಾಸಿಗರಿಗೆ ಮೀನು ಹಿಡಿಯುವ ನೈಪುಣ್ಯತೆಯನ್ನು ಕಲಿಸುವ ವ್ಯವಸ್ಥೆಯಿದೆ. ಇಲ್ಲಿ ಟೂನ, ಷಾರ್ಕ್, ಬಾರಕುಡ, ಡಾಲ್ಫಿನ್ ಸೇರಿದಂತೆ 1000ಕ್ಕೂ ಹೆಚ್ಚು ವೈವಿಧ್ಯಮಯ ಮೀನುಗಳಿವೆ. ಹಾಂ! ನಿಮ್ಮಲ್ಲಿ ಫಿಶಿಂಗ್ ಚಾತುರ್ಯವಿದೆಯೇ? ಚಾತುರ್ಯವಿದ್ದು, ಮೀನುಗಳನ್ನು ಹಿಡಿದರೆ, ನೀವೇ 'ಬಾರ್ಬಿಕ್ಯು'ಮಾಡಿ ಸವಿಯುವ ಅವಕಾಶವೂ ಇದೆ.

ಆ ರಾತ್ರಿ, ಜೋಸೆಫ್‌ರಿಂದ ನಮಗಾಗಿ ಬೀಚಿನಲ್ಲಿ ವಿಶೇಷ ವ್ಯವಸ್ಥೆ. ಸೌಮ್ಯವಾದ ಅಲೆಗಳಿಂದ ಪ್ರಶಾಂತವಾಗಿದ್ದ ಸಮುದ್ರ, ಮೈ ಸೋಕುತ್ತಿದ್ದ ತಂಗಾಳಿ, ಬಾರ್ಬಿಕ್ಯು ಮತ್ತು ರುಚಿಕರ ಅಡುಗೆಯ ಜೊತೆಗೆ ಹೋಟೆಲಿನ ಗಿಟಾರ್ ವಾದಕ ನಮಗಿಷ್ಟವಿದ್ದ ಹಾಡುಗಳನ್ನು ನುಡಿಸುತ್ತಿದ್ದ. ಈ ಮೋಹಕ ತಾಣದ ಪ್ರೈವೇಟ್ ಡಿನ್ನರ್, ಮಧುಚಂದ್ರದ ನಮ್ಮ ನೆನಪುಗಳನ್ನು ಹಸಿರಾಗಿಸಿ, ಜರ್ಮನ್ ದಂಪತಿಗಳಂತೆ, ನಾವೂ ಮತ್ತೆ ಮತ್ತೆ ಮಾಲ್ದೀವ್ಸ್‌ಗೆ ಬರಬೇಕು ಎನ್ನುವ ಆಸೆ ಹುಟ್ಟಿಸಿತು.

ಮುಂಜಾನೆ ರೆಸಾರ್ಟಿನಲ್ಲಿ ನಡೆದಾಡುವಾಗ ಸಿಕ್ಕ ಏಷಿಯಾದ ಪ್ರವಾಸಿಗರ ಮುಗುಳ್ನಗೆಯ ಹಲೋ; ಯೂರೋಪ್ ಮತ್ತು ಅಮೆರಿಕ ದೇಶದವರ ಮಂದಹಾಸ...

ಆ ದಿನದ ಕಾರ್ಯಕ್ರಮದಂತೆ, ನಾವು ಪ್ಯಾರಾಸೇಲಿಂಗ್ ಮಾಡುವರಿದ್ದೆವು. ವಿಸ್ತಾರವಾದ ಸಾಗರ ಪ್ರದೇಶದಲ್ಲಿ, ನನ್ನನ್ನು ಹಾರಲು ಸಜ್ಜುಗೊಳಿಸಿ, ನಿಯಂತ್ರಣವನ್ನು ಸಡಿಲಗೊಳಿಸುತ್ತಿದ್ದಂತೆಯೇ ಉಬ್ಬುತ್ತಿದ್ದ ಪ್ಯಾರಾಚೂಟ್ ಮೇಲೇರಿ, ಆಕಾಶದಲ್ಲಿ ಹಾರುವ ಅನುಭವವಾಯಿತು. ನಿಮಿಷಗಳಲ್ಲಿ ಸುಮಾರು 1000 ಅಡಿಯ ಎತ್ತರಕ್ಕೇರಿದೆ. ಅಂತರಿಕ್ಷದಿಂದ ಕಾಣಿಸುತ್ತಿದ್ದ ದ್ವೀಪ ಸಮೂಹದ ದೃಶ್ಯ ಅಮೋಘವಾಗಿತ್ತು.

ಆಕಾಶದಲ್ಲಿ ಹಾರುವುದು ಅತಿರೋಮಾಂಚನಕಾರಿ. ಆದರೆ ಹಕ್ಕಿಯಂತೆ ಆಕಾಶದಲ್ಲಿ ಹಾರುತ್ತಿದ್ದರೂ, ಅವುಗಳಿಗಿರುವ ಹಿಡಿತ, ನಿಯಂತ್ರಣ ನನ್ನಲ್ಲಿರಲಿಲ್ಲ; ಆ ನಿಯಂತ್ರಣವಿದ್ದುದು ಬೋಟಿನ ನಾವಿಕನಲ್ಲಿ. ಕಾಣದ ನಿಯಂತ್ರಣ ಸಡಿಲವಾದಾಗ ಮೇಲೇರುವ, ಬಿಗಿಯಾದಾಗ ಕೆಳಗಿಳಿಯುವ, ಬೋಟ್ ಚಲಿಸುವ ದಿಕ್ಕಿನಲ್ಲೇ ನಮ್ಮನ್ನೂ ಸೆಳೆಯುವ, ಆ ಅನುಭವ ಬದುಕಿಗೆ ಹತ್ತಿರವಿತ್ತು. ಜೀವನದಲ್ಲಿ ಎಷ್ಟೇ ಯಶಸ್ವಿಯಾದರೂ, ಕಾಣದ ಶಕ್ತಿಯೊಂದು, ಬದುಕಿನಲ್ಲಿ ಅಗೋಚರವಾದ ಗುರಿಯತ್ತ ನಮ್ಮನ್ನು ಸೆಳೆಯುತ್ತಿರುತ್ತದೆ. ನಮ್ಮ ಇರವು-ಅರಿವಿನ ವಾಸ್ತವತೆಯಿಂದ ಮನಸ್ಸು ಹಗುರಾಗಿ, ನವಚೈತನ್ಯ ತುಂಬಿ ಇನ್ನಷ್ಟು ಹಾರಾಡುವ ಎನಿಸುತ್ತಿತ್ತು. ಸಮಯ ಮುಗಿದು ಪ್ಯಾರಾಚೂಟ್ ಕೆಳಗಿಳಿಯತೊಡಗಿತು. ನೀವು ಸಾಹಸ ಪ್ರವೃತ್ತಿಯವರಾದರೆ, ನೀರಿನಲ್ಲಿ ಇಳಿಸಿ, ಮೇಲಕ್ಕೆತ್ತಿ, ಮತ್ತೆ ನೀರಿನೊಂದಿಗೆ ಆಟವಾಡಿಸಿ, ಬೋಟಿನ ಮೇಲಿಳಿಸುತ್ತಾರೆ. ಅಥವಾ ಬೇಕಿದ್ದರೆ ನೇರವಾಗಿ ಬೋಟಿನ ಮೇಲೆ ಸೇಫ್ ಲ್ಯಾಂಡಿಂಗ್ ಮಾಡಿಸುತ್ತಾರೆ.

## ಸ್ಟಿಂಗ್‌ರೆ ಫೀಡಿಂಗ್

ಸಂಜೆ ರೆಸಾರ್ಟಿನ ಬೀಚಿನಲ್ಲಿ ಆಶ್ಚರ್ಯಕರ ಅನುಭವ. ದಿನಚರಿಯಂತೆ, ನಿಗದಿತ ಸಮಯಕ್ಕೆ 30-40 ಷಾರ್ಕ್ ಜಾತಿಯ ಸ್ಟಿಂಗ್‌ರೆ ಎಂಬ ಕಡಲ ಮೀನುಗಳು ಬರುತ್ತವೆ. ನೀರಿನಿಂದ ಮೇಲಕ್ಕೆ ಜಿಗಿಯುವ ಮೀನುಗಳು ಹಿಡಿಯುವಂತೆ ಆಹಾರವನ್ನು ಎಸೆಯುವುದೊಂದು ಚಟುವಟಿಕೆ. ವರ್ಷಗಳಿಂದ ಇದೇ ಕೆಲಸದಲ್ಲಿರುವ ಬಾಂಗ್ಲಾದೇಶದ ಜಿಯಾ, ಸ್ಟಿಂಗ್‌ರೆ ಬಗ್ಗೆ ವಹಿಸಬೇಕಾದ ಎಚ್ಚರಿಕೆಗಳನ್ನು ತಿಳಿಸಿದ. ಸ್ಟಿಂಗ್‌ರೆ ಸಾಮಾನ್ಯವಾಗಿ ಸ್ನೇಹಜೀವಿ! ಆದರೆ ಐದು ವರ್ಷಗಳ ಹಿಂದೆ, ಹೆಸರಾಂತ ವನ್ಯಜೀವಿ ತಜ್ಞ ಸ್ಟೀವ್ ಇರ್ವಿನ್‌ನನ್ನು ಇರಿದು ಸಾಯಿಸಿದ್ದನ್ನು ಮರೆಯಲಾಗದು. ಇವುಗಳ ಮೈ ಮುಟ್ಟುವುದು, ಆಹಾರ ನೀಡುವುದು ಉಲ್ಲಾಸಕರ ಅನುಭವ. ಮಾರನೆಯ ದಿನ ವಿಶ್ರಾಂತಿಗಾಗಿ. ಇಲ್ಲಿನ ಸ್ಪಾದಲ್ಲಿ ಬಾಲಿನೀಸ್, ಥಾಯ್, ಚೈನೀಸ್, ಸ್ವೀಡಿಶ್ ಮತ್ತು ಆಯುರ್ವೇದದ ಮಾಲೀಶ್ ಮಾಡುತ್ತಾರೆ. ಮಕ್ಕಳಿಗೂ, ವಯಸ್ಕರಿಗೂ, ವೃದ್ಧರಿಗೂ ಇಷ್ಟವಾಗುವಂತ ಚಟುವಟಿಕೆಗಳಿರುವ ಮಾಲ್ದೀವ್ಸ್ ಎಲ್ಲ ಪ್ರವಾಸಿಗರಿಗೂ ಪ್ರಶಸ್ತ.

## ಕಿವಿ ಮಾತು...

ಮನ ತಣಿಸುವ ಮಾಲ್ದೀವ್ಸ್‌ಗೆ ಬೆಂಗಳೂರಿನಿಂದ ಕೇವಲ ಎರಡು ಗಂಟೆಗಳ ಪ್ರಯಾಣ. ಇಲ್ಲಿಗೆ ಹೋಗಿ ಬರುವ ವೆಚ್ಚವೂ ಹೆಚ್ಚಲ್ಲ. ವೆಚ್ಚಕ್ಕೆ ಹೋಲಿಸಿದರೆ, ಇಲ್ಲಿನ ಪರಿಸರದ ಅಪರೂಪದ ಅನುಭವಗಳು ಹೆಚ್ಚು ತೂಗುತ್ತವೆ. ಯಾಂತ್ರಿಕ ಬದುಕಿನ ಒತ್ತಡದಿಂದ ಮುಕ್ತವಾಗಿ, ಮನೋಲ್ಲಾಸದೊಂದಿಗೆ ಮನೋವಿಕಾಸವನ್ನೂ ಮಾಡುವ ದ್ವೀಪರಾಷ್ಟ್ರ ಮಾಲ್ದೀವ್ಸ್.